ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1105 (1288)
2 ಸದಸ್ಯರ ಹೆಸರು : ಶ್ರೀ. ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
3 ಉತ್ತರಿಸಬೇಕಾದ ದಿನಾಂಕ : 08-03-2022
4 ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆಯಲ್ಲಿ ಎಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು;	ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ದಡಿ ವಿಜಯಪುರ ಜಿಲ್ಲೆಯ ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಳಕಂಡ ಪ್ಯಾಕೇಜುಗಳಲ್ಲಿ ಒಳಚರಂಡಿ ಜಾಲ ಮತ್ತು ಒಳಚರಂಡಿ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಾಣದ ಕಾಮಗಾರಿ ಹಮ್ಮಿಕೊಂಡು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ನಗರ ಪಾಲಿಕೆಗೆ ಹಸ್ತಾಂತರಿಸಿದೆ.

ಕಾಮಗಾರಿ ಹೆಸರು	ಪರಿಷ್ಕೃತ ಗುತ್ತಿಗೆ ಮೊತ್ತ (ರೂ. ಕೋಟಿ)	ಗುತ್ತಿಗೆದಾರರ ಹೆಸರು	ಷರಾ
ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ ಸ್ಥಾಪನೆ ಹಾಗೂ ಇಂಟರ್‌ಸೆಪ್ಶನ್, ಹೊಸ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಡಿಸ್ಟ್ರಿಕ್ಟ್ ಎ) ಹಾಗೂ ಮಳೆನೀರು ಚರಂಡಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02)	18.11	ಮೆ//ರಾಮ್ಕಿ ಇನ್ಫ್ರಾಸ್ಟ್ರಕ್ಚರ್, ಜಿ.ವಿ.	ಗುತ್ತಿಗೆ ರದ್ದುಪಡಿಸಲಾಗಿದೆ.
2ಬಿ ಡಿಸ್ಟ್ರಿಕ್‌ಟ್‌ಯಲ್ಲಿ ಒಳಚರಂಡಿ ವ್ಯವಸ್ಥೆ ಸುಧಾರಣೆ ಮತ್ತು ಎಫ್‌ಎಎಲ್ ಮಾದರಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02ಎ)	16.23	ಮೆ//ರಾಮ್ಕಿ ಇನ್ಫ್ರಾಸ್ಟ್ರಕ್ಚರ್, ಜಿ.ವಿ.	ಗುತ್ತಿಗೆ ರದ್ದುಪಡಿಸಲಾಗಿದೆ.
ಒಳಚರಂಡಿ ವ್ಯವಸ್ಥೆ ಸುಧಾರಣೆ (ಪ್ಯಾಕೇಜು-02ಬಿಜೆಆರ್02ಬಿ).	19.21	ಮೆ//ಪಾಟೀಲ್ ಕನ್‌ಸ್ಟ್ರಕ್ಷನ್ಸ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ.	ಕಾಮಗಾರಿ ಪೂರ್ಣಗೊಂಡಿದೆ.

<table>
<tr><th>ಕ್ರ.
ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td></td><td></td><td>
<table>
<tr><td>ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ ಜೀವನ ಹಾಗೂ ಇಂಟರ್‌ಸೆಪ್ಷನ್, ಹೊಸ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಡಿಸ್ಟ್ರಿಕ್ಟ್ ಎ) ಹಾಗೂ ಮಳೆನೀರು ಚರಂಡಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02ಡಿ). ರದ್ದು ಪಡಿಸಿದ ಪ್ಯಾಕೇಜು 02ಬಿಜೆಆರ್02 ಮರು ಗುತ್ತಿಗೆ</td><td>26.42</td><td>ಮೆ//ಪಿ.ಸಿ.ಸ್ನೇಹಾಲ್ ಕನ್‌ಸ್ಟ್ರಕ್ಷನ್ಸ್</td><td>ಕಾಮಗಾರಿ ಪೂರ್ಣಗೊಂಡಿದೆ.</td></tr>
<tr><td>2ಬಿ ಡಿಸ್ಟ್ರಿಕ್ಟ್‌ಯಲ್ಲಿ ಒಳಚರಂಡಿ ವ್ಯವಸ್ಥೆ ಸುಧಾರಣೆ ಮತ್ತು ಎಫ್‌ಎಎಲ್ ಮಾದರಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02ಇ).</td><td>43.80</td><td>ಮೆ//ಲಕ್ಷ್ಮೀ ಸಿವಿಲ್ ಇಂಜಿನೀಯರಿಂಗ್</td><td>ಕಾಮಗಾರಿ ಪೂರ್ಣಗೊಂಡಿದೆ.</td></tr>
</table>
ಸದರಿ ಯೋಜನೆಯಡಿ ಒಟ್ಟು ಒಳಚರಂಡಿ ಜಾಲ: 142.24 ಕಿ.ಮೀ, ಮ್ಯಾನ್ ಹೋಲ್ : 5419 ಸಂಖ್ಯೆ, ರಿಸೀವಿಂಗ್ ಚೇಂಬರ್ : 6592 ಸಂಖ್ಯೆ ಮತ್ತು ಜಲ ತ್ಯಾಜ್ಯ ಸಂಸ್ಕರಣ ಘಟಕ 31 ಎಂಎಲ್‌ಡಿ ಕಾಮಗಾರಿಗಳು ಪೂರ್ಣಗೊಳಿಸಲಾಗಿದೆ.
ಇದಲ್ಲದೆ, ಸೈನಿಕ್ ಶಾಲೆ ಆವರಣದಲ್ಲಿ ಶಾಲೆಯಲ್ಲಿ ಉತ್ಪತ್ತಿಯಾಗುವ ಜಲ ತ್ಯಾಜ್ಯವನ್ನು ಶುದ್ಧೀಕರಿಸಲು 250 ಕೆಎಲ್‌ಡಿ ಎಸ್‌ಬಿಆರ್ ಮಾದರಿಯ ತ್ಯಾಜ್ಯ ನೀರು ಸಂಸ್ಕರಣ ಘಟಕ ನಿರ್ಮಿಸಲಾಗಿದೆ.
</td></tr>
<tr><td>ಆ)</td><td>ಬಂಡವಾಳ ಹೂಡಿಕೆಯ ಎರಡು ಕಾಮಗಾರಿಗಳ ಗುತ್ತಿಗೆಯನ್ನು ರದ್ದು ಪಡಿಸಲಾಗಿದ್ದು, ಬೇರೆಯವರಿಗೆ ಗುತ್ತಿಗೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಗುತ್ತಿಗೆ ರದ್ದುಪಡಿಸಲು ಕಾರಣಗಳೇನು;</td><td>
ಎನ್‌ಕೆಯುಎಸ್‌ಐಪಿ ಯೋಜನೆಯಡಿ ವಿಜಯಪುರ ನಗರದಲ್ಲಿ ಎರಡು ಒಳಚರಂಡಿ ಕಾಮಗಾರಿ ಪ್ಯಾಕೇಜುಗಳ ಗುತ್ತಿಗೆಯನ್ನು ರದ್ದುಗೊಳಿಸಲಾಗಿತ್ತು. ತದನಂತರ ಮರುಟೆಂಡರ್ ನೀಡಿ ಬೇರೆ ಗುತ್ತಿಗೆದಾರರಿಂದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ವಿವರ ಕೆಳಕಂಡಂತಿದೆ:
1) ಅಸ್ತಿತ್ವದಲ್ಲಿರುವ ಒಳಚರಂಡಿ ವ್ಯವಸ್ಥೆಯ ಪುನರ್ಜೀವನ ಹಾಗೂ ಇಂಟರ್‌ಸೆಪ್ಷನ್, ಹೊಸ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ವಿಸ್ತರಣೆ (ಡಿಸ್ಟ್ರಿಕ್ಟ್ ಎ) ಹಾಗೂ ಮಳೆನೀರು ಚರಂಡಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್02) ಗುತ್ತಿಗೆಯನ್ನು ರೂ.53.74 ಕೋಟಿಗೆ ದಿನಾಂಕ 01-02-2011 ರಂದು ಮೆ//ರಾಮ್ಕಿ ಇನ್‌ಫ್ರಾಸ್ಟ್ರಕ್ಚರ್, ಜಿ.ವಿ. ರವರಿಗೆ ನೀಡಲಾಗಿತ್ತು. ಗುತ್ತಿಗೆದಾರರು ಕರಾರಿನ ನಿಯಮಾನುಸಾರ
</td></tr>
</table>

ಕ್ರ. ಸಂ.	ಪ್ರಶ್ನೆಗಳು	ಉತ್ತರ
		ನಿಗಧಿತ ಅವದಿಯೊಳಗೆ ಪ್ರಗತಿ ಸಾದಿಸದ ಕಾರಣ ಗುತ್ತಿಗೆಯನ್ನು ದಿನಾಂಕ 20-01-2015 ರಂದು ರದ್ದುಪಡಿಸಲಾಗಿದೆ. ಉಳಿಕೆ ಕಾಮಗಾರಿಯನ್ನು ಮರುಟೆಂಡರ್‌ದಾರರಾದ ಮೆ//ಪಿ.ಸಿ.ಸ್ನೇಹಾಲ್ ಕನ್‌ಸ್ಟ್ರಕ್ಷನ್ಸ್ ರವರು ದಿನಾಂಕ 07-05-2016 ರಂದು ರೂ.33.20 ಕೋಟಿಗೆ ಗುತ್ತಿಗೆ ಪಡೆದು ದಿನಾಂಕ 06-05-2018 ರಂದು ಪೂರ್ಣಗೊಳಿಸಿ ಮುಂದಿನ ನಿರ್ವಹಣೆಗೆ ವಿಜಯಪುರ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. 2) 2ಬಿ ಡಿಸ್ಟ್ರಿಕ್ಟ್‌ಯಲ್ಲಿ ಒಳಚರಂಡಿ ವ್ಯವಸ್ಥೆ ಸುಧಾರಣೆ ಮತ್ತು ಎಫ್ ಎಎಲ್ ಮಾದರಿ ಎಸ್.ಟಿ.ಪಿ ನಿರ್ಮಾಣ (ಪ್ಯಾಕೇಜು-02ಬಿಜೆಆರ್ 02ಎ) ಗುತ್ತಿಗೆಯನ್ನು ರೂ.40.11 ಕೋಟಿಗೆ ದಿನಾಂಕ 01-02-2011 ರಂದು ಮೆ//ರಾಮ್ಕಿ ಇನ್‌ಫ್ರಾಸ್ಟ್ರಕ್ಚರ್, ಜಿ.ವಿ. ರವರಿಗೆ ನೀಡಲಾಗಿತ್ತು. ಗುತ್ತಿಗೆದಾರರು ಕರಾರಿನ ನಿಯಮಾನುಸಾರ ನಿಗಧಿತ ಅವದಿಯೊಳಗೆ ಪ್ರಗತಿ ಸಾದಿಸದ ಕಾರಣ ಗುತ್ತಿಗೆಯನ್ನು ದಿನಾಂಕ 20-01-2015 ರಂದು ರದ್ದುಪಡಿಸಲಾಗಿತ್ತು. ಉಳಿಕೆ ಕಾಮಗಾರಿಯನ್ನು ಮರುಟೆಂಡರ್‌ದಾರರಾದ ಮೆ//ಲಕ್ಷ್ಮೀ ಸಿವಿಲ್ ಇಂಜಿನೀಯರಿಂಗ್ ರವರು ದಿನಾಂಕ 25-05-2016 ರಂದು ರೂ.42.77 ಕೋಟಿಗೆ ಗುತ್ತಿಗೆ ಪಡೆದು ದಿನಾಂಕ 24-11-2018 ರಂದು ಪೂರ್ಣಗೊಳಿಸಿ ವಿಜಯಪುರ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿರುತ್ತಾರೆ. ಹಾಗು ಇದರ ನಿರ್ವಹಣೆಯನ್ನು ನಗರಪಾಲಿಕೆ ನಿರ್ವಹಿಸುತ್ತಿರುತ್ತಾರೆ.
3	ಟೆಂಡರ್‌ನ್ನು ಕರೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಯಾವಾಗ?	ಎನ್‌ಕೆಯುಎಸ್‌ಐಪಿ ಯೋಜನೆಯಡಿ ವಿಜಯಪುರ ನಗರದಲ್ಲಿ ರದ್ದುಪಡಿಸಿದ ಎರಡು ಒಳಚರಂಡಿ ಕಾಮಗಾರಿ ಪ್ಯಾಕೇಜುಗಳ ಗುತ್ತಿಗೆಯನ್ನು ಮರುಟೆಂಡರ್ ಕರೆದು ಬೇರೆ ಗುತ್ತಿಗೆದಾರರಿಂದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂದಿನ ನಿರ್ವಹಣೆಗೆ ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ.

ಕಡತ ಸಂಖ್ಯೆ: ನಅಇ 44 ಪಿ.ಆರ್.ಜೆ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು